ಸೂ. 96 56. ಅಲ್‌ವಾಕಿಅಃ ರು. 3

سورة الواقعة مكية — اٰياتها ٩٦ — ركوعاتها ٣

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಸಂಭವಿಸಲಿರುವ ಆ ಘಟನೆ ಸಂಭವಿಸಿದಾಗ-

إِذَا وَقَعَتِ الْوَاقِعَةُ ①

2. ಅದರ ಸಂಭವವನ್ನು ಸುಳ್ಳಾಗಿಸುವವನಾರೂ ಇರಲಾರನು.

لَيْسَ لِوَقْعَتِهَا كَاذِبَةٌ ②

3. ಅದು ಬುಡಮೇಲುಗೊಳಿಸಿ ಬಿಡುವಂತಹ ವಿಪತ್ತಾಗಿರುವುದು-

خَافِضَةٌ رَّافِعَةٌ ③

4. ಆಗ ಭೂಮಿಯು ಹಠಾತ್ತನೆ ನಡುಗಿಸಲ್ಪಡುವುದು[1]-

إِذَا رُجَّتِ الْأَرْضُ رَجًّا ④

5. ಮತ್ತು ಪರ್ವತಗಳನ್ನು ಚೂರುಚೂರು ಮಾಡಿಬಿಡಲಾಗುವುದು.

وَّبُسَّتِ الْجِبَالُ بَسًّا ⑤

6. ಅವು ಹಬ್ಬಿದ ಧೂಳಾಗಿ ಬಿಡುವುವು.

فَكَانَتْ هَبَآءً مُّنْبَثًّا ⑥

7. ಆಗ ನೀವು ಮೂರು ಗುಂಪುಗಳಾಗಿ ವಿಂಗಡಿಸಲ್ಪಡುವಿರಿ.

وَّكُنْتُمْ أَزْوَاجًا ثَلٰثَةً ⑦

8. ಬಲಗಡೆಯವರು. ಬಲಗಡೆಯವರ (ಸೌಭಾಗ್ಯದ) ಕುರಿತು ಹೇಳುವುದೇನು!

فَأَصْحٰبُ الْمَيْمَنَةِ مَآ أَصْحٰبُ الْمَيْمَنَةِ ⑧

9. ಮತ್ತು ಎಡಗಡೆಯವರು- ಎಡೆಗಡೆಯವರ (ದುರದೃಷ್ಟದ) ಕುರಿತು ವರ್ಣಿಸುವುದೇನು!

وَأَصْحٰبُ الْمَشْـَٔمَةِ مَآ أَصْحٰبُ الْمَشْـَٔمَةِ ⑨

10. ಅಗ್ರಗಣ್ಯರಂತು ಅಗ್ರಗಣ್ಯರೇ ಆಗಿರುತ್ತಾರೆ.

وَالسّٰبِقُوْنَ السّٰبِقُوْنَ ⑩

11. ನಿಕಟವರ್ತಿಗಳು ಅವರೇ ತಾನೆ.

أُولٰٓئِكَ الْمُقَرَّبُوْنَ ⑪

12. ಸಂಪತ್ಸಮೃದ್ಧ ಸ್ವರ್ಗೋದ್ಯಾನಗಳಲ್ಲಿ ವಾಸಿಸುವರು.

فِيْ جَنّٰتِ النَّعِيْمِ ⑫

1. ಅರ್ಥಾತ್- ಅದೊಂದು ಪ್ರಾದೇಶಿಕ ಭೂಕಂಪವಾಗಿರಲಾರದು. ಬದಲಾಗಿ, ಸಮಸ್ತ ಭೂಮಿಯನ್ನು ಏಕಕಾಲಕ್ಕೆ ಕಂಪಿಸಲಾಗುವುದು.

13. ಹಿಂದಿನವರಲ್ಲಿ ಅನೇಕರಿರುವರು-

ثُلَّةٌ مِّنَ الْأَوَّلِينَ ﴿١٣﴾

14. ಮುಂದಿನವರಲ್ಲಿ ಕಡಿಮೆ ಇರುವರು.

وَقَلِيلٌ مِّنَ الْآخِرِينَ ﴿١٤﴾

15. ರತ್ನಖಚಿತ ಪೀಠಗಳ ಮೇಲೆ-

عَلَىٰ سُرُرٍ مَّوْضُونَةٍ ﴿١٥﴾

16. ದಿಂಬುಗಳಿಗೆ ಒರಗಿ ಎದುರುಬದುರಾಗಿ ಕುಳಿತುಕೊಳ್ಳುವರು-

مُّتَّكِئِينَ عَلَيْهَا مُتَقَابِلِينَ ﴿١٦﴾

17. ಅವರ ಕೂಟಗಳಲ್ಲಿ ಚಿರಬಾಲಕರು[2] ಓಡಾಡುತ್ತಿರುವರು-

يَطُوفُ عَلَيْهِمْ وِلْدَانٌ مُّخَلَّدُونَ ﴿١٧﴾

18. ಸುರಾಭರಿತ ಲೋಟೆಗಳನ್ನು, ಹೂಜೆಗಳನ್ನು ಮತ್ತು ಪಾನಪಾತ್ರೆ ಗಳನ್ನೆತ್ತಿಕೊಂಡು.

بِأَكْوَابٍ وَأَبَارِيقَ وَكَأْسٍ مِّن مَّعِينٍ ﴿١٨﴾

19. ಅದನ್ನು ಕುಡಿದಾಗ ಅವರ ತಲೆ ತಿರುಗಲಾರದು ಮತ್ತು ಅವರ ಬುದ್ಧಿಯೂ ಮಂಕಾಗಲಾರದು-

لَّا يُصَدَّعُونَ عَنْهَا وَلَا يُنزِفُونَ ﴿١٩﴾

20. ಆ ಬಾಲಕರು ಅವರ ಮುಂದೆ ತರತರದ ಹಣ್ಣುಹಂಪಲುಗಳನ್ನು -ಅವರಿಗೆ ಇಷ್ಟವಿದ್ದುದನ್ನು ಆಯ್ದುಕೊಳ್ಳಲಿಕ್ಕಾಗಿ- ತಂದಿರಿಸುವರು-

وَفَاكِهَةٍ مِّمَّا يَتَخَيَّرُونَ ﴿٢٠﴾

21. ಅವರು ತಮಗೆ ಇಷ್ಟ ಬಂದುದನ್ನು ಉಪಯೋಗಿಸಿಕೊಳ್ಳುವಂತೆ ಪಕ್ಷಿಗಳ ಮಾಂಸವನ್ನು ಮುಂದಿರಿಸಲಾಗುವುದು.

وَلَحْمِ طَيْرٍ مِّمَّا يَشْتَهُونَ ﴿٢١﴾

22. ಅವರಿಗಾಗಿ ಸುಂದರ ನಯನೆಯರಾದ ಅಪ್ಸರೆಯರಿರುವರು-

وَحُورٌ عِينٌ ﴿٢٢﴾

23. ಅವರು ಬಚ್ಚಿಡಲಾದ ಮುತ್ತುಗಳೋ ಎಂಬಂತೆ ಸುಂದರಿ ಯಾಗಿರುವರು.

كَأَمْثَالِ اللُّؤْلُؤِ الْمَكْنُونِ ﴿٢٣﴾

24. ಇವೆಲ್ಲ ಅವರು ಭೂಲೋಕದಲ್ಲಿ ಮಾಡುತ್ತಿದ್ದ ಸತ್ಕರ್ಮಗಳ ಪ್ರತಿಫಲದ ರೂಪದಲ್ಲಿ ಅವರಿಗೆ ಸಿಗುವುದು.

جَزَاءً بِمَا كَانُوا يَعْمَلُونَ ﴿٢٤﴾

25. ಅಲ್ಲಿ ಅವರು ಯಾವುದೇ ನಿರರ್ಥಕ ಅಥವಾ ಪಾಪದ ಮಾತನ್ನು ಕೇಳಲಾರರು.

لَا يَسْمَعُونَ فِيهَا لَغْوًا وَلَا تَأْثِيمًا ﴿٢٥﴾

26. ಪ್ರತಿಯೊಂದು ಮಾತೂ ಸರಿಯಾದ ಮಾತೇ ಆಗಿರುವುದು.

إِلَّا قِيلًا سَلَامًا سَلَامًا ﴿٢٦﴾

27. ಇನ್ನು ಬಲಗಡೆಯವರು, ಬಲಗಡೆಯವರ (ಸೌಭಾಗ್ಯದ) ಕುರಿತು ಹೇಳುವುದೇನು!

وَأَصْحَابُ الْيَمِينِ مَا أَصْحَابُ الْيَمِينِ ﴿٢٧﴾

2. ಅರ್ಥಾತ್- ಶಾಶ್ವತವಾಗಿ ಬಾಲಕರಾಗಿಯೇ ಇರುವವರು. ಅವರ ಪ್ರಾಯ ಸದಾ ಒಂದೇ ತೆರನಾಗಿರುವುದು.

28. ಅವರು ಮುಳ್ಳಿಲ್ಲದ ಬುಗರಿಗಳು,[3]	فِي سِدْرٍ مَّخْضُودٍ ﴿٢٨﴾
29. ಒಂದರ ಮೇಲೊಂದರಂತೆ ಪದರಗಳಾಗಿರುವ ಬಾಳೆಹಣ್ಣುಗಳು,	وَطَلْحٍ مَّنضُودٍ ﴿٢٩﴾
30. ಬಹುದೂರದ ವರೆಗೆ ಹಬ್ಬಿರುವ ನೆರಳು,	وَظِلٍّ مَّمْدُودٍ ﴿٣٠﴾
31. ಸದಾ ಹರಿಯುತ್ತಲೇ ಇರುವ ನೀರು-	وَمَاءٍ مَّسْكُوبٍ ﴿٣١﴾
32-33. ಮತ್ತು ಎಂದೂ ಮುಗಿದು ಹೋಗದ ಹಾಗೂ ಅಡೆ ತಡೆಯಿಲ್ಲದೆ ಧಾರಾಳವಾಗಿ ಸಿಗುತ್ತಲಿರುವ ಹಣ್ಣು ಹಂಪಲುಗಳ ನಡುವೆ-	وَفَاكِهَةٍ كَثِيرَةٍ ﴿٣٢﴾ لَّا مَقْطُوعَةٍ وَلَا مَمْنُوعَةٍ ﴿٣٣﴾
34. ಉನ್ನತ ಪೀಠಗಳಲ್ಲಿರುವರು.	وَفُرُشٍ مَّرْفُوعَةٍ ﴿٣٤﴾
35. ನಾವು ಅವರ ಪತ್ನಿಯರನ್ನು ವಿಶಿಷ್ಟ ರೀತಿಯಲ್ಲಿ ಹೊಸತಾಗಿ ಸೃಷ್ಟಿಸುವೆವು-	إِنَّا أَنشَأْنَاهُنَّ إِنشَاءً ﴿٣٥﴾
36. ಮತ್ತು ಅವರನ್ನು ಕನ್ಯೆಯರನ್ನಾಗಿ ಮಾಡುವೆವು-	فَجَعَلْنَاهُنَّ أَبْكَارًا ﴿٣٦﴾
37. ಅವರು ತಮ್ಮ ಪತಿಯನ್ನು ಪ್ರೀತಿಸುವವರು ಮತ್ತು ಸಮಾನ ವಯಸ್ಕರಾಗಿರುವರು-	عُرُبًا أَتْرَابًا ﴿٣٧﴾
38. ಇವೆಲ್ಲ ಬಲಗಡೆಯವರಿಗಾಗಿ.	لِّأَصْحَابِ الْيَمِينِ ﴿٣٨﴾
39. ಅವರು ಹಿಂದಿನವರಲ್ಲೂ ಅನೇಕರಿರುವರು-	ثُلَّةٌ مِّنَ الْأَوَّلِينَ ﴿٣٩﴾
40. ಮತ್ತು ಮುಂದಿನವರಲ್ಲೂ ಅನೇಕರಿರುವರು.	وَثُلَّةٌ مِّنَ الْآخِرِينَ ﴿٤٠﴾
41. ಇನ್ನು ಎಡಗಡೆಯವರು. ಎಡಗಡೆಯವರ (ದೌರ್ಭಾಗ್ಯದ) ಕುರಿತು ಹೇಳುವುದೇನು!	وَأَصْحَابُ الشِّمَالِ مَا أَصْحَابُ الشِّمَالِ ﴿٤١﴾
42. ಅವರು ಸುಡುಗಾಳಿಯ ಉರಿಯಲ್ಲೂ ಕುದಿಯುತ್ತಿರುವ ನೀರಲ್ಲೂ-	فِي سَمُومٍ وَحَمِيمٍ ﴿٤٢﴾

3. ಅರ್ಥಾತ್- ಮುಳ್ಳುಗಳಿಲ್ಲದ ಮರದ ಬೋರೆ ಹಣ್ಣುಗಳು. ಬೋರೆ ಹಣ್ಣುಗಳು ಎಷ್ಟು ಉತ್ತಮವಾಗಿರುತ್ತವೋ ಅಷ್ಟೇ ಅವುಗಳ ಮರದಲ್ಲಿ ಮುಳ್ಳುಗಳು ಕಡಿಮೆಯಿರುತ್ತವೆ. ಆದ್ದರಿಂದಲೇ ಸ್ವರ್ಗದ ಬುಗರಿಗಳನ್ನು ಪರಿಚಯಿಸುತ್ತಾ ಅದರ ಮರದಲ್ಲಿ ಮುಳ್ಳುಗಳೇ ಇರುವುದಿಲ್ಲ ಎಂದು ಹೇಳಲಾಗಿದೆ. ಅರ್ಥಾತ್ ಅವು ಲೋಕದಲ್ಲಿ ಲಭ್ಯವಿಲ್ಲದಂತಹ ಅತ್ಯುತ್ತಮ ಗುಣಮಟ್ಟದ್ದಾಗಿರುವುವು.

43. ಕಪ್ಪುಹೊಗೆಯ ನೆರಳಲ್ಲೂ ಇರುವರು-

وَّظِلٍّ مِّنْ يَّحْمُوْمٍ ۝٤٣

44. ಅದು ತಂಪೂ ಆಗಿರದು, ಸುಖದಾಯಕವೂ ಆಗಿರದು.

لَّا بَارِدٍ وَّلَا كَرِيْمٍ ۝٤٤

45. ಇವರು ಈ ಗತಿಗೆ ಬರುವುದಕ್ಕೆ ಮುಂಚೆ ಸುಸ್ಥಿತಿಯಲ್ಲಿದ್ದರು-

اِنَّهُمْ كَانُوْا قَبْلَ ذٰلِكَ مُتْرَفِيْنَ ۝٤٥

46. ಮತ್ತು ಮಹಾಪಾತಕಗಳಿಗೇ ಅಂಟಿಕೊಂಡಿದ್ದರು.

وَكَانُوْا يُصِرُّوْنَ عَلَى الْحِنْثِ الْعَظِيْمِ ۝٤٦

47. ಅವರು ಹೇಳುತ್ತಿದ್ದರು, "ನಾವು ಸತ್ತು ಮಣ್ಣಾಗಿ ಹೋದಾಗ ಮತ್ತು ಎಲುಬುಗೂಡುಗಳಾಗಿ ಬಿಟ್ಟಾಗ ಪುನಃ ಎಬ್ಬಿಸಿ ನಿಲ್ಲಿಸಲ್ಪಡುವೆವೇ?

وَكَانُوْا يَقُوْلُوْنَ ۙ اَئِذَا مِتْنَا وَكُنَّا تُرَابًا وَّعِظَامًا ءَاِنَّا لَمَبْعُوْثُوْنَ ۝٤٧

48. ನಮಗಿಂತ ಮುಂಚೆ ಗತಿಸಿರುವ ನಮ್ಮ ಪೂರ್ವಜರೂ ಎಬ್ಬಿಸಲ್ಪಡುವರೇ?"

اَوَ اٰبَآؤُنَا الْاَوَّلُوْنَ ۝٤٨

49. ಸಂದೇಶವಾಹಕರೇ, ಇವರೊಡನೆ ಹೇಳಿರಿ- ನಿಶ್ಚಯವಾಗಿಯೂ ಹಿಂದಿನವರೂ ಮುಂದಿನವರೂ-

قُلْ اِنَّ الْاَوَّلِيْنَ وَالْاٰخِرِيْنَ ۝٤٩

50. ಎಲ್ಲರೂ ಒಂದು ದಿನ ಒಟ್ಟುಗೂಡಿಸಲ್ಪಡುವರು. ಅದರ ಸಮಯ ನಿಶ್ಚಿತವಾಗಿದೆ.

لَمَجْمُوْعُوْنَ ۙ اِلٰى مِيْقَاتِ يَوْمٍ مَّعْلُوْمٍ ۝٥٠

51. ಓ ಪಥಭ್ರಷ್ಟರೇ ಮತ್ತು ಸುಳ್ಳಾಗಿಸುವವರೇ! ನೀವು

ثُمَّ اِنَّكُمْ اَيُّهَا الضَّآلُّوْنَ الْمُكَذِّبُوْنَ ۝٥١

52. 'ಝುಕ್ಕೂಮ್' ವೃಕ್ಷದ ಆಹಾರವನ್ನು ತಿನ್ನಲಿರುವಿರಿ-

لَاٰكِلُوْنَ مِنْ شَجَرٍ مِّنْ زَقُّوْمٍ ۝٥٢

53. ಅದರಿಂದಲೇ ನೀವು ಹೊಟ್ಟೆ ತುಂಬುವಿರಿ-

فَمَالِـُٔوْنَ مِنْهَا الْبُطُوْنَ ۝٥٣

54. ಮತ್ತು ಅದರ ಮೇಲೆ ಕುದಿಯುವ ನೀರನ್ನು ಕುಡಿಯುವಿರಿ.

فَشٰرِبُوْنَ عَلَيْهِ مِنَ الْحَمِيْمِ ۝٥٤

55. ಬಾಯಾರಿಕೆಯಿಂದ ಬೆಂಡಾದ ಒಂಟೆಯು ಕುಡಿಯುವಂತೆ.

فَشٰرِبُوْنَ شُرْبَ الْهِيْمِ ۝٥٥

56. ಇದುವೇ (ಈ ಎಡಭಾಗದವರಿಗೆ) ಪ್ರತಿಫಲದ ದಿನ ಸಿಗಲಿರುವ ಆತಿಥ್ಯ.

هٰذَا نُزُلُهُمْ يَوْمَ الدِّيْنِ ۝٥٦

57. ನಾವು ನಿಮ್ಮನ್ನು ಸೃಷ್ಟಿಸಿದೆವು. ಆದರೂ ನೀವು ದೃಢೀಕರಿಸುವುದಿಲ್ಲವೇಕೆ?[4]

نَحْنُ خَلَقْنٰكُمْ فَلَوْلَا تُصَدِّقُوْنَ ۝٥٧

4. ಅರ್ಥಾತ್- ನಾವೇ ನಿಮ್ಮ ಪ್ರಭುವೂ ಆರಾಧ್ಯರೂ ಆಗಿದ್ದೇವೆ ಮತ್ತು ನಾವು ನಿಮ್ಮನ್ನು ಮತ್ತೊಮ್ಮೆ ಸೃಷ್ಟಿಸಬಲ್ಲೆವು ಎಂದು ನೀವೇಕೆ ದೃಢೀಕರಿಸುವುದಿಲ್ಲ.

58. ನೀವು ಸುರಿಸುವ ವೀರ್ಯದ ಕುರಿತು ನೀವೆಂದಾದರೂ ವಿವೇಚಿಸಿರುವಿರಾ?

أَفَرَءَيْتُم مَّا تُمْنُونَ ٥٨

59. ಅದರಿಂದ ಶಿಶುವನ್ನು ಉಂಟು ಮಾಡುವವರು ನೀವೋ ಅಥವಾ ಅದನ್ನುಂಟುಮಾಡುವವರು ನಾವೋ?

ءَأَنتُمْ تَخْلُقُونَهُۥٓ أَمْ نَحْنُ ٱلْخَٰلِقُونَ ٥٩

60-61. ನಾವು ನಿಮ್ಮೊಳಗೆ ಮರಣವನ್ನು ಹಂಚಿರುತ್ತೇವೆ. ನಿಮ್ಮ ರೂಪಗಳನ್ನು ಬದಲಾಯಿಸಿ ಬಿಡಲಿಕ್ಕೂ ನಿಮಗೆ ತಿಳಿದಿರದ ಯಾವುದಾದರೂ ರೂಪದಲ್ಲಿ ನಿಮ್ಮನ್ನು ಸೃಷ್ಟಿಸಲಿಕ್ಕೂ ನಾವು ಅಶಕ್ತರಲ್ಲ.

نَحْنُ قَدَّرْنَا بَيْنَكُمُ ٱلْمَوْتَ وَمَا نَحْنُ بِمَسْبُوقِينَ ٦٠

عَلَىٰٓ أَن نُّبَدِّلَ أَمْثَٰلَكُمْ وَنُنشِئَكُمْ فِى مَا لَا تَعْلَمُونَ ٦١

62. ನಿಮ್ಮ ಪ್ರಥಮ ಜನನದ ಕುರಿತಂತೂ ನಿಮಗೆ ತಿಳಿದೇ ಇದೆ. ಮತ್ತೇಕೆ ಪಾಠ ಕಲಿಯುವುದಿಲ್ಲ?

وَلَقَدْ عَلِمْتُمُ ٱلنَّشْأَةَ ٱلْأُولَىٰ فَلَوْلَا تَذَكَّرُونَ ٦٢

63. ನೀವು ಬಿತ್ತುವ ಬೀಜದ ಕುರಿತು ನೀವೆಂದಾದರೂ ವಿವೇಚಿಸಿದಿರಾ?

أَفَرَءَيْتُم مَّا تَحْرُثُونَ ٦٣

64. ಅವುಗಳಿಂದ ಬೆಳೆಯನ್ನು ಬೆಳೆಸುವವರು ನೀವೋ ಅಥವಾ ಅದನ್ನು ಬೆಳೆಸುವವರು ನಾವೋ?

ءَأَنتُمْ تَزْرَعُونَهُۥٓ أَمْ نَحْنُ ٱلزَّٰرِعُونَ ٦٤

65. ನಾವಿಚ್ಛಿಸಿದರೆ ಆ ಹೊಲಗಳನ್ನು ಹೊಟ್ಟನ್ನಾಗಿ ಮಾಡಿ ಬಿಡಬಲ್ಲೆವು.

لَوْ نَشَآءُ لَجَعَلْنَٰهُ حُطَٰمًا فَظَلْتُمْ تَفَكَّهُونَ ٦٥

66. ಆಗ ನೀವು- ತರತರದ ಮಾತುಗಳನ್ನಾಡುತ್ತಲೇ ಇರುವಿರಿ-

إِنَّا لَمُغْرَمُونَ ٦٦

67. ಎಲ್ಲವೂ ನಮ್ಮ ಮೇಲೆ ತಿರುಗಿ ಬಿತ್ತು. ನಿಜವಾಗಿ ನಮ್ಮ ಭಾಗ್ಯವೇ ಹಾಳು.

بَلْ نَحْنُ مَحْرُومُونَ ٦٧

68. ನೀವು ಕುಡಿಯುವ ನೀರಿನ ಬಗ್ಗೆ ಎಂದಾದರೂ ವಿವೇಚಿಸಿದ್ದುಂಟೇ?

أَفَرَءَيْتُمُ ٱلْمَآءَ ٱلَّذِى تَشْرَبُونَ ٦٨

69. ಅದನ್ನು ಮೋಡಗಳಿಂದ ಸುರಿಸಿದವರು ನೀವೋ ಅಥವಾ ಅದನ್ನು ಸುರಿಸಿದವರು ನಾವೋ?

ءَأَنتُمْ أَنزَلْتُمُوهُ مِنَ ٱلْمُزْنِ أَمْ نَحْنُ ٱلْمُنزِلُونَ ٦٩

70. ನಾವಿಚ್ಛಿಸಿದರೆ ಅದನ್ನು ಕಡು ಉಪ್ಪನ್ನಾಗಿ ಮಾಡಿ ಬಿಡಬಲ್ಲೆವು. ಹೀಗಿರುತ್ತ ನೀವೇಕೆ ಕೃತಜ್ಞರಾಗುವುದಿಲ್ಲ?

لَوْ نَشَآءُ جَعَلْنَٰهُ أُجَاجًا فَلَوْلَا تَشْكُرُونَ ٧٠

71. ನೀವು ಉರಿಸುತ್ತಿರುವ ಬೆಂಕಿಯ ಕುರಿತು ನೀವೆಂದಾದರೂ ವಿವೇಚನೆ ನಡೆಸಿದ್ದುಂಟೇ?

أَفَرَءَيْتُمُ ٱلنَّارَ ٱلَّتِى تُورُونَ ٧١

72. ಅದರ ಮರವನ್ನು ಉಂಟು ಮಾಡಿದವರು ನೀವೋ ಅಥವಾ ಅದನ್ನುಂಟು ಮಾಡಿದವರು ನಾವೋ?[5]

ءَأَنتُمْ أَنشَأْتُمْ شَجَرَتَهَا أَمْ نَحْنُ الْمُنشِئُونَ ﴿٧٢﴾

73. ನಾವು ಅದನ್ನು ಸ್ಮರಣ ಸಾಧನವಾಗಿಯೂ ಅಗತ್ಯವುಳ್ಳವರಿಗೆ ಜೀವನ ಸಾಧನವಾಗಿಯೂ ಮಾಡಿರುತ್ತೇವೆ.

نَحْنُ جَعَلْنَاهَا تَذْكِرَةً وَمَتَاعًا لِّلْمُقْوِينَ ﴿٧٣﴾

74. ಆದುದರಿಂದ ಸಂದೇಶವಾಹಕರೇ, ಅತ್ಯಂತ ಮಹಾನನಾದ ನಿಮ್ಮ ಪ್ರಭುವಿನ ನಾಮವನ್ನು ಕೊಂಡಾಡಿರಿ.[6]

فَسَبِّحْ بِاسْمِ رَبِّكَ الْعَظِيمِ ﴿٧٤﴾

75. ಹಾಗಲ್ಲ,[7] ನಾನು ನಕ್ಷತ್ರಗಳ ಸ್ಥಾನಗಳ ಆಣೆಯಿಡುತ್ತೇನೆ.

فَلَا أُقْسِمُ بِمَوَاقِعِ النُّجُومِ ﴿٧٥﴾

76. ನೀವು ಅರಿಯುವುದಾದರೆ, ಇದು ಅತಿದೊಡ್ಡ ಆಣೆಯಾಗಿದೆ.[8]

وَإِنَّهُ لَقَسَمٌ لَّوْ تَعْلَمُونَ عَظِيمٌ ﴿٧٦﴾

77. ಇದೊಂದು ಉನ್ನತ ಮಟ್ಟದ ಕುರ್‌ಆನ್ ಎಂಬುದರ ಕುರಿತು-

إِنَّهُ لَقُرْآنٌ كَرِيمٌ ﴿٧٧﴾

78. ಇದು ಒಂದು ಸುರಕ್ಷಿತ ಗ್ರಂಥದಲ್ಲಿ ಮುದ್ರಿತವಿದೆ.[9]

فِي كِتَابٍ مَّكْنُونٍ ﴿٧٨﴾

79. ಪರಿಶುದ್ಧರಲ್ಲದೆ ಬೇರಾರೂ ಇದನ್ನು ಸ್ಪರ್ಶಿಸಲಾರರು.

لَّا يَمَسُّهُ إِلَّا الْمُطَهَّرُونَ ﴿٧٩﴾

80. ಇದು ಸಕಲ ಲೋಕಪಾಲಕನಿಂದ ಅವತೀರ್ಣಗೊಂಡುದಾಗಿದೆ.

تَنزِيلٌ مِّن رَّبِّ الْعَالَمِينَ ﴿٨٠﴾

81. ಹೀಗಿರುತ್ತ ನೀವು ಈ ವಾಣಿಯ ಕುರಿತು ನಿರ್ಲಕ್ಷ್ಯ ತೋರುತ್ತೀರಾ?

أَفَبِهَٰذَا الْحَدِيثِ أَنتُم مُّدْهِنُونَ ﴿٨١﴾

82. ಮತ್ತು ಈ ಅನುಗ್ರಹದಲ್ಲಿ- ಇದನ್ನು ತಿರಸ್ಕರಿಸುವುದನ್ನೇ ನಿಮ್ಮ ಪಾಲನ್ನಾಗಿ ಮಾಡಿಕೊಂಡಿರುವಿರಾ?

وَتَجْعَلُونَ رِزْقَكُمْ أَنَّكُمْ تُكَذِّبُونَ ﴿٨٢﴾

83-87. ನೀವು ಪರಾಧೀನರಲ್ಲದಿದ್ದರೆ ಮತ್ತು ನಿಮ್ಮ ಭಾವನೆಯಲ್ಲಿ

فَلَوْلَا إِذَا بَلَغَتِ الْحُلْقُومَ ﴿٨٣﴾

5. ಅರ್ಥಾತ್- ಯಾವ ಮರದ ಕಟ್ಟಿಗೆಗಳಿಂದ ನೀವು ಬೆಂಕಿ ಉರಿಸುತ್ತೀರೋ ಅದನ್ನು ಸೃಷ್ಟಿಸಿದವರು ನಾವೋ ಅಥವಾ ನೀವೋ?

6. ಅರ್ಥಾತ್- ಸತ್ಯನಿಷೇಧಿಗಳು ಮತ್ತು ಬಹುದೇವಾರಾಧಕರು ಅಲ್ಲಾಹನಿಗೆ ಗೊತ್ತುಪಡಿಸುವ ಹಾಗೂ ಸತ್ಯನಿಷೇಧ ಮತ್ತು ಬಹುದೇವಾರಾಧನೆಯ ವಿಶ್ವಾಸ ಹಾಗೂ ಪರಲೋಕದ ನಿರಾಕರಣೆಯ ಪ್ರತಿಯೊಂದು ವಾದದಲ್ಲೂ ಅಡಕವಾಗಿರುವ ದೋಷ ಮತ್ತು ದೌರ್ಬಲ್ಯಗಳೆಲ್ಲದರಿಂದಲೂ ಅವನು ಮುಕ್ತನು ಎಂದು ಅವನ ಪಾವನ ಹೆಸರಿನಿಂದ ಪ್ರಕಟಣೆ ಮಾಡಿರಿ.

7. ಅರ್ಥಾತ್- ನೀವು ನಂಬಿರುವ ವಿಷಯ ದಿಟವಲ್ಲ. ಇಲ್ಲಿ ಕುರ್‌ಆನ್ ಅಲ್ಲಾಹನ ವತಿಯಿಂದಲೇ ಕಳುಹಿಸಲ್ಪಟ್ಟಿದೆ ಎಂಬ ಬಗ್ಗೆ ಆಣೆ ಹಾಕುವ ಮೊದಲು 'ಲಾ'-'ಅಲ್ಲ' ಎಂಬ ಪದವನ್ನು ಬಳಸಲಾಗಿದೆ. ಜನರು ಈ ಪವಿತ್ರ ಗ್ರಂಥದ ಬಗ್ಗೆ ಆಡಿಕೊಳ್ಳುತ್ತಿದ್ದ ಮಾತನ್ನು ನಿರಾಕರಿಸುವುದೇ ಈ ಆಣೆ ಹಾಕುವುದರ ಉದ್ದೇಶವೆಂದು ಇದರಿಂದ ವ್ಯಕ್ತವಾಗುತ್ತದೆ.

8. ಗ್ರಹ-ನಕ್ಷತ್ರಾದಿಗಳ ಸ್ಥಾನವೆಂದರೆ ಅವುಗಳ ನೆಲೆ, ಹಂತಗಳು ಮತ್ತು ಕಕ್ಷೆಗಳಾಗಿವೆ. ಕುರ್‌ಆನ್ ಉನ್ನತಮಟ್ಟದ ಗ್ರಂಥವಾಗಿರುವ ಬಗ್ಗೆ ಅದರ ಆಣೆ ಹಾಕಲಾಗಿದೆ. ಏಕೆಂದರೆ ಉನ್ನತ ಗಗನದಲ್ಲಿರುವ ಗಗನ ಕಾಯಗಳ ವ್ಯವಸ್ಥೆ ಸುದೃಢ ಮತ್ತು ಸುಸ್ಥಿರವಾಗಿರುವಂತೆಯೇ ಈ ಗ್ರಂಥವೂ ಸುಭದ್ರ ಮತ್ತು ಸುಸ್ಥಿರವಾಗಿದೆ. ಆ ವ್ಯವಸ್ಥೆಯನ್ನು ರೂಪಿಸಿರುವ ದೇವನೇ ಈ ಗ್ರಂಥವನ್ನೂ ಅವತೀರ್ಣಗೊಳಿಸಿದ್ದಾನೆ.

9. ಅರ್ಥಾತ್- ಇದು ಪಾವನ ದೇವಚರರ ಮೂಲಕ ಅವತೀರ್ಣಗೊಂಡಿದೆ. ಪಿಶಾಚಿಗಳಿಗೆ ಇದರಲ್ಲಿ ಯಾವುದೇ ಹಸ್ತಕ್ಷೇಪವಿಲ್ಲ.

وَ اَنۡتُمۡ حِيۡنَئِذٍ تَنۡظُرُوۡنَ ۝٨٤
وَ نَحۡنُ اَقۡرَبُ اِلَيۡهِ مِنۡكُمۡ وَلٰـكِنۡ
لَّا تُبۡصِرُوۡنَ ۝٨٥
فَلَوۡلَاۤ اِنۡ كُنۡتُمۡ غَيۡرَ مَدِيۡنِيۡنَ ۝٨٦
تَرۡجِعُوۡنَهَاۤ اِنۡ كُنۡتُمۡ صٰدِقِيۡنَ ۝٨٧

ನೀವು ಸತ್ಯವಾದಿಗಳಾಗಿದ್ದರೆ, ಮರಣ ಹೊಂದುತ್ತಿರುವವನ ಪ್ರಾಣವು ಗಂಟಲಿನ ವರೆಗೆ ತಲಪಿದ್ದಾಗ ಮತ್ತು ಅವನು ಸಾಯುತ್ತಿ ರುವುದನ್ನು ನೀವು ಕಣ್ಣಾರೆ ಕಾಣುತ್ತಿರುವಾಗ ಹೊರಟು ಹೋಗುತ್ತಿರುವ ಅವನ ಪ್ರಾಣವನ್ನು ಮರಳಿ ತರುವುದಿಲ್ಲವೇಕೆ? ಆಗ ಅವನಿಗೆ ನಿಮಗಿಂತಲೂ ನಾವು ಹೆಚ್ಚು ನಿಕಟವಾಗಿರುತ್ತೇವೆ. ಆದರೆ ನಿಮಗೆ ತೋರುವುದಿಲ್ಲ.

فَاَمَّاۤ اِنۡ كَانَ مِنَ الۡمُقَرَّبِيۡنَ ۝٨٨

88. ಇನ್ನು ಆ ಮರಣ ಹೊಂದುವವನು ನಿಕಟವರ್ತಿಗಳಲ್ಲಾಗಿದ್ದರೆ,

فَرَوۡحٌ وَّرَيۡحَانٌ ۙ وَّجَنَّتُ نَعِيۡمٍ ۝٨٩

89. ಅವನಿಗೆ ಸುಖ ಸಂತೋಷ, ಅತ್ಯುತ್ತಮ ಜೀವನಾಧಾರ ಮತ್ತು ಅನುಗ್ರಹ ತುಂಬಿದ ಸ್ವರ್ಗೋದ್ಯಾನವಿದೆ.

وَاَمَّاۤ اِنۡ كَانَ مِنۡ اَصۡحٰبِ الۡيَمِيۡنِ ۝٩٠

90. ಅವನು ಬಲಗಡೆಯವನಾಗಿದ್ದರೆ,

فَسَلٰمٌ لَّكَ مِنۡ اَصۡحٰبِ الۡيَمِيۡنِ ۝٩١

91. "ನಿನ್ನ ಮೇಲೆ ಶಾಂತಿ ಇರಲಿ, ನೀನು ಬಲಗಡೆಯವರಲ್ಲಾಗಿರುತ್ತೀ" ಎಂದು ಅವನನ್ನು ಸ್ವಾಗತಿಸಲಾಗುವುದು

وَاَمَّاۤ اِنۡ كَانَ مِنَ الۡمُكَذِّبِيۡنَ
الضَّآلِّيۡنَ ۝٩٢

92. ಮತ್ತು ಅವನು ಸುಳ್ಳಾಗಿಸುವ ಪಥಭ್ರಷ್ಟರಲ್ಲಾಗಿದ್ದರೆ,

فَنُزُلٌ مِّنۡ حَمِيۡمٍ ۝٩٣

93. ಅವನ ಸತ್ಕಾರಕ್ಕಾಗಿ ಕುದಿಯುವ ನೀರು,

وَّتَصۡلِيَةُ جَحِيۡمٍ ۝٩٤

94. ಮತ್ತು ನರಕಕ್ಕೆ ತಳ್ಳಲ್ಪಡುವುದು ಇದೆ-

اِنَّ هٰذَا لَهُوَ حَقُّ الۡيَقِيۡنِ ۝٩٥

95. ಇದೆಲ್ಲವೂ ಖಚಿತವಾದ ಸತ್ಯವಾಗಿದೆ.

فَسَبِّحۡ بِاسۡمِ رَبِّكَ الۡعَظِيۡمِ ۝٩٦

96. ಆದುದರಿಂದ ಸಂದೇಶವಾಹಕರೇ, ನಿಮ್ಮ ಮಹಿಮಾಪೂರ್ಣ ಪ್ರಭುವಿನ ನಾಮವನ್ನು ಜಪಿಸಿರಿ.[10]

10. ಈ ಆದೇಶದ ಪ್ರಕಾರ ರುಕೂಅ್‌ನ ವೇಳೆ 'ಸುಬ್‌ಹಾನರಬ್ಬಿಯಲ್ ಅಝೀಮ್' ಎಂದು ಪಠಿಸುವಂತೆ ಪ್ರವಾದಿವರ್ಯರು(ಸ) ಆದೇಶಿಸಿದರು.